ಅನುದಾನ ಮಂಜೂರಾತಿ

251 (413) ಶ್ರೀ ಮಂಜುನಾಥ್ ಹೆಚ್.ಪಿ. (ಹುಣಸೂರು) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ:–

(ಅ) ಮೈಸೂರು ಜಿಲ್ಲೆ ಹುಣಸೂರು ತಾಲ್ಲೂಕಿನ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ 2009–10ನೇ ಸಾಲಿನಲ್ಲಿ ಪ್ರಸಕ್ತ ಸಾಲಿನವರೆಗೂ ಮಂಜೂರಾದ ಅನುದಾನವೆಷ್ಟು; (ಯೋಜನಾವಾರು ವಿವರ ನೀಡುವುದು)

(ಆ) ಮಂಜೂರಾದ ಅನುದಾನದಲ್ಲಿ ಯಾವ ಯಾವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ?

ಶ್ರೀ ಕಳಶಪ್ಪ ಜಿ. ಬಂಡಿ (ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು)

(ಅ), (ಆ), ಮೈಸೂರು ಜಿಲ್ಲೆಯ ಹುಣಸೂರು ತಾಲ್ಲೂಕಿಗೆ ಮಂಜೂರಾದ ಯೋಜನಾ ಕಾರ್ಯಕ್ರಮಗಳು ಮತ್ತು ಹಮ್ಮಿಕೊಳ್ಳಲಾದ ಯೋಜನಾ ಕಾರ್ಯಕ್ರಮಗಳು ಹಾಗೂ ಆಯವ್ಯಯ ಅನುದಾನದ ವಿವರಗಳನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆಗೆ ಸಂಬಂಧಿಸಿದಂತೆ ಅನುಬಂಧ–1, 2 ಮತ್ತು 3 ರಲ್ಲಿ ಒದಗಿಸಲಾಗಿದೆ.

ಅನುಬಂಧ-1

ಮೈಸೂರು ಜಿಲ್ಲೆಯ ಹುಣಸೂರು ತಾಲ್ಲೂಕಿಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖಾ ವತಿಯಿಂದ 2009-10, 2010-11 ಹಾಗೂ 2011-12ನೇ ಸಾಲಿನ ವರೆಗೆ ಮಂಜೂರಾದ ಅನುದಾನ ಎಷ್ಟು? (ಯೋಜನಾವಾರು ನೀಡುವುದು)

(ರೂ.ಲಕ್ಷಗಳಲ್ಲಿ)

ಕ್ರ.ಸಂ	ಕಾರ್ಯಕ್ರಮ/ಯೋಜನೆಯ ವಿವರ	2009-10		2010-11		2011-12	
		ಬಿಡುಗಡೆಯಾದ ಅನುದಾನ	ವೆಚ್ಚ	ಬಿಡುಗಡೆಯಾದ ಅನುದಾನ	ವೆಚ್ಚ	ಬಿಡುಗಡೆಯಾದ ಅನುದಾನ	ವೆಚ್ಚ
1	ಅಂಗನವಾಡಿ ಕಾರ್ಯಕರ್ತೆ/ ಸಹಾಯಕಿಯವರಿಗೆ ಹಚ್ಚುವರಿ ಗೌರವಧನ ಪಾವತಿ	56.39	56.39	57.45	57.45	109.90	102.05
2	ಕೇಂದ್ರ ಪುರಸ್ಕೃತ ಯೋಜನೆ ಯಡಿ ಸಮಗ್ರ ಶಿಶುಅಭಿವೃದ್ಧಿ ಯೋಜನೆ ಆಡಳಿತಾತ್ಮಕವೆಚ್ಚ	181.89	136.82	185.82	158.72	218.00	217.07
3	ಇಲಾಖಾ ಅನುದಾನದಡಿ ಅಂಗನವಾಡಿ ಕಟ್ಟಡಗಳ ನಿರ್ಮಾಣ ಹಾಗೂ ನಿರ್ವಹಣೆ	3.50	3.50	3.50	3.50	3.50	3.50
4	ಅಂಗನವಾಡಿ ಫಲಾನುಭವಿಗಳಿಗೆ ಪೂರಕ ಪೌಷ್ಟಿಕ ಆಹಾರ ವಿತರಣೆ ಕಾರ್ಯಕ್ರಮ	294.00	181.76	338.43	248.36	303.11	213.90
5	ವಿಶೇಷ ಅಭಿವೃದ್ಧಿ ಯೋಜನೆ ಯಡಿ ಅಂಗನವಾಡಿ ಕಟ್ಟಡಗಳ ನಿರ್ಮಾಣ	32.40	32.40	0	0	0	0
6	ಆರ್‌ಐಡಿಎಫ್ ಯೋಜನೆಯಡಿ ಅಂಗನವಾಡಿ ಕಟ್ಟಡಗಳ ನಿರ್ಮಾಣ	3.62	3.62	11.04	11.04	25.08	25.08
7	ಆಪತ್ಕಾಲಿಕ ಮಕ್ಕಳ ವೈದ್ಯಕೀಯ ವೆಚ್ಚ	0.08	0.08	0.03	0.03	2.03	2.03
8	ಕಿಶೋರಿ ಶಕ್ತಿ ಯೋಜನೆ	0.55	0.55	0.88	0.88	0.50	0.50
9	ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರಿಗೆ ವೈದ್ಯಕೀಯ ವೆಚ್ಚ ಮತ್ತು ಮರಣ ಪರಿಹಾರ	0.10	0.10	0	0	0.20	0.20
10	ಭಾಗ್ಯಲಕ್ಷ್ಮಿ ಯೋಜನೆ	102.60	102.60	16.94	16.94	319.33	319.33
11	ಸ್ತ್ರೀಶಕ್ತಿ ಯೋಜನೆ ವಿವಿಧ ಪರಿಕರಗಳಿಗೆ ಬಿಡುಗಡೆಯಾದ ಅನುದಾನ	3.45	3.45	7.56	7.56	5.02	5.02
12	ಕೌಟುಂಬಿಕ ದೌರ್ಜನ್ಯ ತಡೆಕಾಯ್ದೆ-2005 ರಡಿ	1.06	0.65	1.27	1.17	1.38	1.09
13	ಸಾಂತ್ವನ ಯೋಜನೆ	0.70	0.70	3.10	3.10	2.52	2.52

ಅನುಬಂಧ–2

2. ಮಂಜೂರಾದ ಅನುದಾನದಲ್ಲಿ ಹಮ್ಮಿಕೊಂಡಿರುವ ಕಾರ್ಯಕ್ರಮಗಳು

ಕಾರ್ಯಕ್ರಮ/ಯೋಜನೆಯ ವಿವರ	ಹಮ್ಮಿಕೊಳ್ಳಲಾದ ಕಾರ್ಯಕ್ರಮಗಳ ವಿವರ:
ಅಂಗನವಾಡಿ ಕಾರ್ಯಕರ್ತೆ/ ಸಹಾಯಕಿಯರಿಗೆ ಹೆಚ್ಚುವರಿ ಗೌರವಧನ ಪಾವತಿ	ರಾಜ್ಯ ಸರ್ಕಾರದ ವತಿಯಿಂದ ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯವರಿಗೆ ಪ್ರತಿ ಮಾಹೆ ಕ್ರಮವಾಗಿ ರೂ.1500/– ಹಾಗೂ ರೂ.750/–ರಂತೆ ಹೆಚ್ಚುವರಿ ಗೌರವಧನವನ್ನು ಪಾವತಿಸಲಾಗುತ್ತಿದೆ.
ಕೇಂದ್ರ ಪುರಸ್ಕೃತ ಯೋಜನೆಯಡಿ. ಸಮಗ್ರ ಶಿಶುಅಭಿವೃದ್ಧಿ ಯೋಜನೆ ಆಡಳಿತಾತ್ಮಕವೆಚ್ಚ	ಸಮಗ್ರ ಶಿಶುಅಭಿವೃದ್ಧಿ ಯೋಜನೆ ಕಾರ್ಯಕ್ರಮದಡಿ ಅಧಿಕಾರಿ/ಸಿಬ್ಬಂದಿಗಳ ವೇತನ, ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರ ಗೌರವಧನ, ಆಡಳಿತಾತ್ಮಕ ವೆಚ್ಚಗಳನ್ನು ಪಾವತಿಸಲಾಗುತ್ತಿದೆ.
ಇಲಾಖಾ ಅನುದಾನದಡಿ ಅಂಗನವಾಡಿ ಕಟ್ಟಡಗಳ ನಿರ್ಮಾಣ ಹಾಗೂ ನಿರ್ವಹಣೆ	ಇಲಾಖಾ ಅನುದಾನದಡಿ ರಂತೆ ರೂಪದಲ್ಲಿ 2009–10ನೇ ಸಾಲಿನಲ್ಲಿ ಅಂಗನವಾಡಿ ಕಟ್ಟಡ ನಿರ್ಮಾಣಕ್ಕೆ ಅನುದಾನ ಬಿಡುಗಡೆಯಾಗಿರುತ್ತದೆ. 2010–11 ಹಾಗೂ 2011–12ನೇ ಸಾಲಿನಲ್ಲಿ ಅಂಗನವಾಡಿ ಕಟ್ಟಡಗಳ ದುರಸ್ತಿ ನಿರ್ವಹಣೆಗಾಗಿ ಅನುದಾನ ಬಿಡುಗಡೆ ಮಾಡಲಾಗಿರುತ್ತದೆ. ನಿಗಧಿತ ಉದ್ದೇಶಕ್ಕಾಗಿ ಅನುದಾನವನ್ನು ಬಳಸಲಾಗಿರುತ್ತದೆ.
ಅಂಗನವಾಡಿ ಫಲಾನುಭವಿಗಳಿಗೆ ಪೂರಕ ಪೌಷ್ಟಿಕ ಆಹಾರ ವಿತರಣೆ ಕಾರ್ಯಕ್ರಮ	ಈ ಯೋಜನೆಯಡಿ 0–6 ವರ್ಷದೊಳಗಿನ ಮಕ್ಕಳಿಗೆ ಪ್ರತಿ ಫಲಾನುಭವಿಗೆ ಪ್ರತಿದಿನ ರೂ.4/–ರಂತೆ ಹಾಗೂ ಗರ್ಭಿಣಿ–ಬಾಣಂತಿ/ ಕಿಶೋರಿ/ ಅಂ.ಕಾ.ಕರ್ತೆ/ಸಹಾಯಕಿಯರಿಗೆ ರೂ.5/–ರಂತೆ ಪೂರಕ ಪೌಷ್ಟಿಕ ಆಹಾರ ಕಾರ್ಯಕ್ರಮಕ್ಕೆ ವೆಚ್ಚ ಭರಿಸಲಾಗುತ್ತಿದೆ.
ವಿಶೇಷ ಅಭಿವೃದ್ಧಿ ಯೋಜನೆಯಡಿ ಅಂಗನವಾಡಿ ಕಟ್ಟಡಗಳ ನಿರ್ಮಾಣ	ವಿಶೇಷ ಅಭಿವೃದ್ಧಿ ಯೋಜನೆಯಡಿ ಒಟ್ಟು 9 ಅಂಗನವಾಡಿ ಕಟ್ಟಡಗಳ ನಿರ್ಮಾಣಕ್ಕೆ ತೆಗೆದುಕೊಳ್ಳಲಾಗಿದೆ.
ಆರ್‌ಐಡಿಎಫ್ ಅಂಗನವಾಡಿ ನಿರ್ಮಾಣ	ಯೋಜನೆಯಡಿ ಕಟ್ಟಡಗಳ ಆರ್.ಐ.ಡಿ.ಎಫ್. ಯೋಜನೆಯಡಿ ಒಟ್ಟು 10 ಅಂಗನವಾಡಿ ಕಟ್ಟಡಗಳನ್ನು ನಿರ್ಮಾಣಕ್ಕೆ ತೆಗೆದುಕೊಳ್ಳಲಾಗಿದೆ.
ಅಪೌಷ್ಟಿಕ ಮಕ್ಕಳ ವೈದ್ಯಕೀಯ ವೆಚ್ಚ	ಅತಿ ಕಡಿಮೆ ತೂಕವುಳ್ಳ ಮಕ್ಕಳ ವಿಶೇಷೋಪಚಾರಕ್ಕಾಗಿ ರೂ.750/– ನ್ನು ಮಕ್ಕಳ ಪೋಷಕರಿಗೆ ನೀಡಲಾಗುವುದು.
ಬಾಲಸಂಜೀವಿನಿ	ತುರ್ತು ಚಿಕಿತ್ಸೆ ಅಗತ್ಯವಿರುವ ಮಕ್ಕಳಿಗೆ ಬಾಲಸಂಜೀವಿನಿ ಯೋಜನೆಯಡಿ ರಾಜ್ಯದಲ್ಲಿ ಗುರುತಿಸಿರುವ 8 ಆಸ್ಪತ್ರೆಗಳ ಮೂಲಕ ಉಚಿತ ಚಿಕಿತ್ಸೆಯನ್ನು ನೀಡಲಾಗುತ್ತಿದೆ.
ಕಿಶೋರಿಶಕ್ತಿ ಯೋಜನೆ	ಈ ಕಾರ್ಯಕ್ರಮದಡಿ ಪ್ರತಿ ಅಂಗನವಾಡಿ ಕೇಂದ್ರದಲ್ಲಿ 2 ಕಿಶೋರಿಯರಿಗೆ ಪೂರಕ ಪೌಷ್ಟಿಕ ಆಹಾರವನ್ನು

ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರಿಗೆ ವೈದ್ಯಕೀಯ ವೆಚ್ಚ ಮತ್ತು ಮರಣ	ಗುತ್ತಿಗೆ ಕಾಯಿಕೆಗಳಿಂದ ಬಳಲುವ ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರಿಗೆ ಕ್ರಮವಾಗಿ ಚಿಕಿತ್ಸೆಗಾಗಿ ರೂ.20,000/- ಹಾಗೂ ರೂ.10,000/-ಗಳನ್ನು ನೀಡಲಾಗುವುದು. ಸೇವೆಯಲ್ಲಿದ್ದಾಗ ಮರಣ ಹೊಂದಿದ ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರ ವಾರಸುದಾರರಿಗೆ ಕ್ರಮವಾಗಿ ರೂ.20,000/- ಹಾಗೂ
ಭಾಗ್ಯಲಕ್ಷ್ಮಿ ಯೋಜನೆ:	ಭಾಗ್ಯಲಕ್ಷ್ಮಿ ಯೋಜನೆಯಡಿ ಹುಣಸೂರು ತಾಲ್ಲೂಕಿಗೆ 2009-10 ನೇ ಸಾಲಿನಲ್ಲಿ 821 ಬಾಂಡ್‌ಗಳನ್ನು, 2010-11 ನೇ ಸಾಲಿನಲ್ಲಿ 88 ಬಾಂಡ್‌ಗಳನ್ನು ಹಾಗೂ 2011-12 ನೇ ಸಾಲಿನಲ್ಲಿ 1669 ಬಾಂಡ್‌ಗಳನ್ನು ಫಲಾನುಭವಿಗಳಿಗೆ ವಿತರಿಸಲಾಗಿದೆ.
ಸೀಶಕ್ತ ಯೋಜನೆ ವಿವಿಧ ಕಾರ್ಯಕ್ರಮಗಳಡಿ ಪೌಷ್ಟಿಕಾಂಶಯುಕ್ತ ಆಹಾರ ವಿತರಣೆ	ಸೀಶಕ್ತ ಯೋಜನೆಯಡಿ ಅಂಗನವಾಡಿ ಕಾರ್ಯಕರ್ತೆಯರಿಗೆ ಪ್ರೋತ್ಸಾಹಧನ, ಒಕ್ಕೂಟಗಳ ತರಬೇತಿ, ಆರೋಗ್ಯ ವಿಶೇಷ ಅಭಿವೃದ್ಧಿ ಯೋಜನೆಯಡಿ ಅಧಿಕ ಭಾರತಾಯ ಮಾಡಿರುವ ಗುಂಪುಗಳಿಗೆ ಪ್ರೋತ್ಸಾಹಧನ ನೀಡಲಾಗಿದೆ.
ಕೌಟುಂಬಿಕ ದೌರ್ಜನ್ಯ ತಡೆಕಾಯ್ದೆ:2005ರಡಿ	ಕುಟುಂಬದಲ್ಲಿ ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯವನ್ನು ತಡೆಗಟ್ಟುವ ನಿಟ್ಟಿನಲ್ಲಿ ಆಗತ್ಯವಿರುವ ಪ್ರಕರಣಗಳಲ್ಲಿ ಪರಸ್ಪರ ಸಮಾಲೋಚನೆ ಮೂಲಕ ಇತ್ಯರ್ಥಗೊಳಿಸುವುದು ಹಾಗೂ ದೂರುಗಳನ್ನು ನ್ಯಾಯಾಲಯದ ಮೂಲಕ ಇತ್ಯರ್ಥಗೊಳಿಸಿ ಪರಿಹಾರ ಆಗತ್ಯವಿದ್ದಲ್ಲಿ ಪರಿಹಾರ ದೊರಕಿಸುವುದು.
ಸಾಂತ್ವನ ಯೋಜನೆ:	ನೊಂದ ಮಹಿಳೆಯರಿಗೆ ಸೂಕ್ತ ಸಾಂತ್ವನ ಹಾಗೂ ಪರಿಹಾರ ಒದಗಿಸಲು ಪ್ರತಿ ತಾಲ್ಲೂಕಿನಲ್ಲಿ ಮಹಿಳಾ ಸಾಂತ್ವನ ಸಹಾಯವಾಣಿ ಕೇಂದ್ರಗಳನ್ನು ತೆರೆಯಲಾಗಿದ್ದು, ಈ ಕೇಂದ್ರಗಳ ಅಡಳಿತಾತ್ಮಕ ವೆಚ್ಚ ಸಿಬ್ಬಂದಿ ವೇತನಕ್ಕೆ ಅನುದಾನವನ್ನು ವೆಚ್ಚ ಮಾಡಲಾಗಿದೆ.

ಅನುಬಂಧ-3

ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ

2009-10, 2010-11, 2011-12ನೇ ಸಾಲಿಗೆ ಹುಣಸೂರು ತಾಲ್ಲೂಕುವಾರು ಇಲಾಖಾ ಯೋಜನೆಗಳ ಅನುದಾನದ ವೆಚ್ಚದ ವಿವರಗಳು

ಕ್ರಸಂ	ವಲಯ	ಅನುದಾನ (ರೂ.ಲಕ್ಷಗಳಲ್ಲಿ)		
		2009-10	2010-11	2011-12
1	ವಿಕಲಚೇತನ ವಿದ್ಯಾರ್ಥಿಗಳಿಗೆ ಶಿಷ್ಯವೇತನ	0.28	0.23	0.40
2	ವಿಕಲಚೇತನ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಬಹುಮಾನ ಯೋಜನೆ	0.02	0.02	0.01
3	ಆಧಾರ ಯೋಜನೆ	0.00	0.35	0.35
4	ಯಂತ್ರಚಾಲಿತ ತ್ರಿಚಕ್ರವಾಹನ	0.00	0.00	0
5	ಸಾಧನ ಸಲಕರಣೆಗಳು	2.16	1.44	0.15
	ಒಟ್ಟು	2.46	2.04	0.91